ಮಾಡಿಕೊಂಡಿದ್ದವ. ಕಪ್ಪನೆ ಮಿರಿಮಿರಿ ಮಿಂಚುವ ಬಣ್ಣ, ಉಕ್ಕಿನಂತೆ ಬಲಿಷ್ಠವಾದ ದೇಹ. ಗೌಡರ ಮನೆಯಲ್ಲಿ ಅವನದೇ ಪಾರುಪತ್ಯ. ಅವನಮ್ಮ ಯಾವಾಗಲೋ ತೀರಿ ಹೋಗಿದ್ದಳು. ಅಪ್ಪ, ಮಗ ಗೌಡರ ಮನೆಯ ಹಿಂದಿನ ಗುಬ್ಬಿಗೂಡಿನಲ್ಲಿ ವಾಸವಾಗಿದ್ದರು. ಅಪ್ಪ ತಾನು ಒದ್ದಾಡಿದರೂ ಮಗನನ್ನು ಹತ್ತನೇ ತರಗತಿಯವರೆಗೆ ಓದಿಸಿದ್ದ. ಕಾಯಿಲೆ ಬಿದ್ದ ಮೇಲೆ ಅವನ ಕೆಲಸಗಳೆಲ್ಲ ಪ್ರಕಾಶನ ಪಾಲಾದವು. ಬೆಳ್ಳಂಬೆಳಿಗ್ಗೆ ಎದ್ದು ಅಪ್ಪನಿಗೆ ಗಂಜಿ ಕಾಸಿಟ್ಟು ಹೊರಟರೆ ಪಂಪ್‌ಸೆಟ್ ಹಾಕಿ ಧಣಿಗಳ ಹೊಲ, ಗದ್ದೆಗಳಿಗೆ ನೀರು ಹಾಯಿಸುವದರಿಂದ ಆರಂಭವಾಗಿ, ಫಸಲಿನ ವೀಕ್ಷಣೆ, ಮಾರಾಟ, ಗೌಡರನ್ನು ಕಾರಿನಲ್ಲಿ, ಬೈಕಿನಲ್ಲಿ ಬೇಕಾದಲ್ಲಿ ಕರೆದೊಯ್ಯುವುದು, ಮಕ್ಕಳನ್ನು ಶಾಲೆಗೆ ಬಿಟ್ಟು ಬರುವದು, ಹೇಳಿದ ಮನೆಯ ಕೆಲಸ ಮಾಡುವುದು ಇತ್ಯಾದಿ ಇತ್ಯಾದಿ. ಗೌಡರ ಗಾಡಿಗಳ ಮೇಲೆಲ್ಲ ಇವನದೇ ದರ್ಬಾರು. ಹಳ್ಳಿಯ ಹಾದಿ, ಬೀದಿಗಳಲ್ಲಿ 'ಭರ್' ಎಂದು ದೂಳೆಬ್ಬಿಸುತ್ತ ಹೊರಟರೆ ಊರ ಹೆಂಗಳೆಯರೆಲ್ಲ ತಿರುಗಿ ನೋಡುವದಿತ್ತು.

ಇವ ನಮ್ಮ ಪುಟ್ಟ ಹುಡುಗಿ ನಾಗುಳ ಮನಸ್ಸು ಕದ್ದದ್ದೂ ಒಂದು ವಿಚಿತ್ರ ಸನ್ನಿವೇಶದಲ್ಲಿ. ಆಗ ಊರಲ್ಲಿದ್ದುದು ಮೂರೇ ಬಾವಿಗಳು. ಮೇಲಿನ ಕೇರಿಯಲ್ಲಿ ನಲ್ಲಿಗಳಿದ್ದು ಬಾವಿಯೂ ಒಂದಿತ್ತು. ಇವರ ತಳಕೇರಿಯಲ್ಲಿದ್ದುದು ಒಂದೇ ಕಾಮನ್ ನಲ್ಲಿ. ಅದೂ ನೀರು ಬರುತ್ತಿದ್ದುದು ಮೂರು ದಿನಗಳಿಗೊಮ್ಮೆ. ಬೇಸಿಗೆಯಲ್ಲಂತೂ ಬಂದರೇ ಹೆಚ್ಚು. ಹೀಗಾಗಿ ಬಾವಿಯ ನೀರು ಸೇದಲು ಸಿಕ್ಕಾಪಟ್ಟೆ ಪೈಪೋಟಿ. ಗಲಾಟೆ. ತುಸುದೂರದಲ್ಲಿದ್ದ ಇನ್ನೊಂದು ಬಾವಿ ಕಾಡುದಾರಿಯಲ್ಲಿ... ಸುತ್ತಲೂ ಮರಗಳಿಂದ ಕೂಡಿ ಕಾಡಿನಲ್ಲಿದ್ದಂತೇ ಇತ್ತು. ಬಾವಿಯಲ್ಲಿ ನೀರು ತುಂಬಿದ್ದರೂ ಸೇದುವವರು ಕಡಿಮೆ. ಅಲ್ಲಿದ್ದುದೇ ಒಂದು ಮನೆ. ಅದೇ ಅಜ್ಜಪ್ಪಯ್ಯನದು. ಅವನೋ... ಹಗಲೆಲ್ಲ ಕೆಮ್ಮುತ್ತ ಊರ ಕಟ್ಟೆಯ ಮೇಲೆ ಕುಳಿತಿರುತ್ತಿದ್ದ. ಆ ಬಾವಿಯಲ್ಲಿ ಯಾರೋ ಬಿದ್ದು ಹೆಣವಾದ ಮೇಲೆ ಪಿಶಾಚಿ ಇದೆಯೆಂಬ ಪ್ರತೀತಿ ಹಬ್ಬಿತ್ತು. ಜನ ಅತ್ತ ಸುಳಿಯಲೂ ಹೆದರುತ್ತಿದ್ದರು.

ಬೆಳಿಗ್ಗೆ ಏನಾದರೊಂದನ್ನು ಬೇಯಿಸಿಟ್ಟು ದೇವಮ್ಮ ಕೆಲಸಕ್ಕೆ ಹೊರಟರೆ ತಿರುಗಿ ಮನೆ ಸೇರುತ್ತಿದ್ದುದು ಸಂಜೆಯೇ. ಅದನ್ನೇ ತಿಂದು ವೆಂಕಟಪ್ಪ ಹೊರಡುತ್ತಿದ್ದ. ನಾಗು ಬೆಳಿಗ್ಗೆ ಅಂಗಳ ಗುಡಿಸಿ ಸಾರಿಸಿ, ಕಸ ಮುಸುರೆ ಮುಗಿಸಿ, ನೀರು ತಂದಿಟ್ಟು, ಮಾಡಿಟ್ಟದ್ದನ್ನು ತಿಂದು ಶಾಲೆಗಾಗಿ ಕಟ್ಟಿಕೊಂಡು ಹೊರಡಬೇಕಿತ್ತು. ಜನ ಕಿಕ್ಕಿರಿದು ಸೇರಿದ ಬಾವಿಯಲ್ಲಿ ಅವಳಿಗೆ ನೀರು ಸೇದಲು ಸಿಗುವ ಅವಕಾಶ ಸೊನ್ನೆ. ಮೇಲಾಗಿ ಅಂದು ಜಗಳ ಬೇರೆ ಜೋರಾಗಿತ್ತು. ನೋಡಿದ್ದೇ ಅವಳು ಇದಕ್ಕಿಂತ ಪಿಶಾಚಿಯ ಸಹವಾಸವೇ ಮೇಲೆಂದು ಕಾಡಿನ ಬಾವಿಗೆ ಓಡಿದಳು. ಹೆದರುತ್ತಲೇ ನೀರು ಸೇದಿ ಕೊಡಪಾನವನ್ನೆತ್ತಿ ಸೊಂಟದ ಮೇಲೆ ಇಟ್ಟುಕೊಳ್ಳುವಷ್ಟರಲ್ಲಿ ಹಿಂದೆ ಸದ್ದಾಗಿತ್ತು. ಗಾಬರಿಯಿಂದ ಕೊಡದ ಸಮೇತ ತಿರುಗಿದಾಗ ಕೊಡ ಉರುಳಿ ಕಟ್ಟೆಯ ಕೆಳಗೆ ನಿಂತಿದ್ದ ಪ್ರಕಾಶನ ಮೇಲೆ ಜಲಾಭಿಷೇಕವಾಗಿತ್ತು. ಸಂಪೂರ್ಣ ತೊಯ್ದು ತೊಪ್ಪೆಯಾಗಿದ್ದನವ. ಇನ್ನೇನು ಹೊಡೆದೇ ಬಿಡುತ್ತಾನೆನ್ನಿಸಿ, "ಅಯ್ಯಯ್ಯಪ್ಪೋ!..." ಎಂದು ಕೂಗಿದಳು ನಾಗು. ಕೊಡ ಉರುಳುತ್ತ ಮಾರು ದೂರ ಹೋಗಿ ಬಿತ್ತು. ನೆನೆದು ನಿಂತವ ಬೆದರಿದ ಹರಿಣಿಯನ್ನು ನೋಡಿ ಮುಗುಳ್ನಗುತ್ತ, "ನೀರು ಹಾಕಿದ್ದು ನೀನೆ. ಕೂಗಿದ್ದು ನೀನೇ. ಜನ ನೋಡಿದರೆ ನನ್ನ ಹೊಡೆಯೋದೇ ಸೈ" ಎಂದು ಮುಖ ಒರೆಸಿಕೊಂಡ. ನಾಗು ಅಪರಾಧಿ ಭಾವದಿಂದ, "ನೀ ಹಿಂದೆ ಬಂದಿದ್ದು ಗೊತ್ತಾಗ್ಲಿಲ್ಲ... ತಪ್ಪಾಯ್ತು. ಯಾರಿಗೂ ಹೇಳ್ಬೇಡ" ಎನ್ನುತ್ತ "ಸೊರಿ..."